**ಶಾಲಾ ನಾಯಕತ್ವ: ಶಾಲೆ-ಸಮುದಾಯಗಳ ಸಹಭಾಗಿತ್ವದ ಸ್ಥಾಪನೆ**

| ಕನ್ನಡ |
| --- |
| ನಾನು ಇಲ್ಲಿಗೆ ಮೊದಲ ಬಾರಿ ಬಂದಾಗ, ಶಾಲೆಯಲ್ಲಿನ ಸೌಲಭ್ಯಗಳು ಉತ್ತಮವಾಗಿರಲಿಲ್ಲ. ಇದು ಮಕ್ಕಳು ಮತ್ತು ಅವರ ಪೋಷಕರಿಗೆ ಸಮಸ್ಯೆಯಾಗಿತ್ತು. ಆದ್ದರಿಂದ, ನಾವು BDO ಮತ್ತು engineer ರನ್ನು ಸಂಪರ್ಕಿಸಿ, ಹಗಲೂ ರಾತ್ರಿ ಕೆಲಸವನ್ನು ಸರಿಯಾಗಿ ಮಾಡುವ ಯೋಜನೆಗಾಗಿ, ಅವರನ್ನು ಇಲ್ಲಿ ಕರೆತಂದಿದ್ದೇವೆ.<br>ಶಾಲೆಯ ಮುಂಭಾಗದಲ್ಲಿ ದೊಡ್ಡ ಗುಂಡಿಗಳು ಮತ್ತು ಗಾಢ ಅರಣ್ಯವಿತ್ತು.<br>ಇದೇ ಕಾರಣಕ್ಕಾಗಿ ಪೋಷಕರು ತಮ್ಮ ಮಕ್ಕಳನ್ನು ಇಲ್ಲಿಗೆ ಕಳುಹಿಸಲು ಬಯಸುತ್ತಿರಲಿಲ್ಲ. ನಾವು BDO, SDM, ಗ್ರಾಮದ ಮುಖಂಡರು, BDC ಸದಸ್ಯ ಮತ್ತು block ಪ್ರಮುಖರನ್ನು ಭೇಟಿಯಾದೆವು.<br>ಅವರೆಲ್ಲರನ್ನು ಸಂಪರ್ಕಿಸಿದ ನಂತರ, ನಾವು ಗುಂಡಿಗಳನ್ನು ಮುಚ್ಚಿ, ಶಾಲೆಯನ್ನು ಸಂಪೂರ್ಣ ಸ್ವಚ್ಛಗೊಳಿಸಿದೆವು.<br>ಇದಾದ ನಂತರವಷ್ಟೇ ಪೋಷಕರು ಮತ್ತು ಸಮುದಾಯ ಈ ಶಾಲೆಯೊಂದಿಗೆ ಸಂಬಂಧ ಹೊಂದಲು ಆರಂಭಿಸಿದರು.<br>ನಾನು 2009 ರಲ್ಲಿ ಇಲ್ಲಿಗೆ ಬಂದಾಗ, ಶಾಲೆಯಲ್ಲಿ ಕೇವಲ ಒಂಬತ್ತು ಮಕ್ಕಳು ಮಾತ್ರ ಇದ್ದರು. 300 ಜನಸಂಖ್ಯೆ ಇರುವ ಹಳ್ಳಿಯಲ್ಲಿದೆ ಈ ಶಾಲೆ.<br>ಇಲ್ಲಿ ಐದು Montessori ಶಾಲೆಗಳು ನಡೆಯುತ್ತಿವೆ ಮತ್ತು ಪೋಷಕರು ನಮ್ಮ ಶಾಲೆಗಿಂತ ಹೆಚ್ಚಾಗಿ Montessori ಶಾಲೆಗಳೆಡೆಗೆ ಹೆಚ್ಚಿನ ಆಸಕ್ತಿ ತೋರುತ್ತಿದ್ದರು.<br>ಇದೇ ಕಾರಣಕ್ಕಾಗಿ ಈ ಶಾಲೆಯಲ್ಲಿ ಕೇವಲ ಒಂಬತ್ತು ವಿದ್ಯಾರ್ಥಿಗಳಿದ್ದರು. ನಾನು ಅತ್ಯಂತ ಶ್ರಮಿಸಿದೆ. ಪಾಲಕರನ್ನು ವೈಯಕ್ತಿಕವಾಗಿ ಮನವೊಲಿಸಲು ನಾನು ಮನೆ ಮನೆಗೆ ಭೇಟಿ ನೀಡಿದೆ.<br>ನಾನು ಹಳ್ಳಿಯ ಶಿಕ್ಷಣ ಸಮಿತಿ ಮತ್ತು ಶಾಲಾ ಆಡಳಿತ ಮಂಡಳಿಯೊಂದಿಗೆ ಸಂಪರ್ಕದಲ್ಲಿದ್ದೆ.<br>ನಾನು ಸಮಿತಿಗಳೊಂದಿಗೆ ಸಭೆ ನಡೆಸಿದೆ. ನಾನು ಅವರ ಮನವೊಲಿಸಲು ಯತ್ನಿಸಿದೆ. ನಾನು ಅವರಿಗೆ ಅವರ ಮಕ್ಕಳನ್ನ ಕನಿಷ್ಟ ಒಂದು ವರ್ಷ ಶಾಲೆಗೆ ಕಳುಹಿಸುವಂತೆ ಹೇಳಿದೆ ಹಾಗೂ ಒಂದು ವರ್ಷ ನಮ್ಮ ಶಾಲೆಯ ಶಿಕ್ಷಣವನ್ನು Montessori ಯ ಶಿಕ್ಷಣದೊಂದಿಗೆ ಹೋಲಿಸಿ, ನಂತರ ಅವರಿಗೆ ಅಲ್ಲಿ ಏನು ದೊರೆಯುತ್ತಿದೆ ಮತ್ತು ಇಲ್ಲಿ ಏನು ಲಭ್ಯವಿದೆ ನಿರ್ಧರಿಸಲು ತಿಳಿಸಿದೆ.<br>ನಾವು ತಿಂಗಳಿಗೆ ಎರಡು ಸಭೆಯನ್ನು ನಿಯಮಿತವಾಗಿ ಆಯೋಜಿಸಿ ಅವರ ಮನವೊಲಿಸಲು ಪ್ರಯತ್ನಿಸಿದೆವು. ಹಾಗೂ ನಿಧಾನವಾಗಿ ಪೋಷಕರು ನಮ್ಮಲ್ಲಿ ವಿಶ್ವಾಸ ಹೊಂದಿ ಮಕ್ಕಳನ್ನು ನಮ್ಮಲ್ಲಿಗೆ ಕಳುಹಿಸಲು ಆರಂಭಿಸಿದರು.<br>ಒಂದು ವರ್ಷ ಕಳೆಯಿತು. ಅವರು ಎರಡೂ ಶಾಲೆಗಳ ಕಾರ್ಯವಿಧಾನವನ್ನು ಹೋಲಿಸಿದರು.<br>ಅಲ್ಲಿಂದ, ಇಲ್ಲಿಯವರೆಗೆ ಈ ಶಾಲೆಯ ಕುರಿತ ಅವರ ಆಯ್ಕೆ ಹೆಚ್ಚುತ್ತಲೇ ಇದೆ.<br>ಪ್ರತೀದಿನ ಶಾಲೆಯ ನಂತರ ನಾವೆಲ್ಲಾ ಮರುದಿನದ ಕಾರ್ಯಯೋಜನೆ ರೂಪಿಸುತ್ತೇವೆ. ನಾವು ಏನು ಮಾಡಬೇಕು, |

ಮತ್ತು ನಾವು ಯಾವುದಾದರೂ ಹೊಸ ವಿಷಯ ಕಲಿಯಬೇಕಿದೆಯೇ, ಇದಕ್ಕಾಗಿ ಯಾವ ಬೋಧನಾ ಸಲಕರಣೆಗಳು ಅಗತ್ಯವಿದೆ ಎಂದು ನಿರ್ಧರಿಸುತ್ತೇವೆ.

ಮೂರರಲ್ಲಿ ಒಬ್ಬ ಶಿಕ್ಷಕರು ಯಾವುದೇ ಹೊಸ ವಿಷಯವನ್ನು ಪರಿಚಯಿಸಲು ಅಗತ್ಯವಿರುವ ಪಠ್ಯ ಪದಾರ್ಥವನ್ನು ಅನುಸರಿಸುವ ಜವಾಬ್ದಾರಿ ತೆಗೆದುಕೊಳ್ಳುತ್ತಾರೆ. ಆರಂಭದಿಂದ ನಾವು ವಿಷಯಗಳನ್ನು ಹೀಗೇ ಮಾಡುವುದನ್ನು ಅನುಸರಿಸುತ್ತಿದ್ದೇವೆ.

ಆದ್ದರಿಂದ ನಮ್ಮ ವ್ಯವಸ್ಥೆಗೆ ಹೊಂದಿಕೊಳ್ಳುವುದು ಹೊಸ ಶಿಕ್ಷಕರಿಗೆ ಹೆಚ್ಚು ಸಮಯ ತೆಗೆದುಕೊಳ್ಳುವುದಿಲ್ಲ.

ಹೆಚ್ಚಿನ ಸಮಯದ ಅಗತ್ಯವಿಲ್ಲದೇ ಅವರು ಇಲ್ಲಿನ ಕಾರ್ಯ ವೈಖರಿಗೆ ಹೊಂದಿಕೊಳ್ಳುತ್ತಾರೆ.

ಹಿಂದಿನ ದಿನ ಯೋಜಿಸಿದ ಚಟುವಟಿಕೆಗಳನ್ನು ನಾವು ಅಳವಡಿಸಿಕೊಳ್ಳುತ್ತೇವೆ.